# ಜಾತಿ ವಿನಾಶ: ತೇಜಸ್ವಿಯವರ ವಿಚಾರಗಳು

**ಸಂತೋಷ ಉಂಡಾಡಿ[1] & ಎಸ್.ಎಂ. ಗಂಗಾಧರಯ್ಯ[2]**

[1]ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಥಣಿ.

[2]ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು, ಫ. ಗು. ಹಳಕಟ್ಟಿ ಸ್ನಾತಕೋತ್ತರ ಅಧ್ಯಯನ ಕೇಂದ್ರ, ರಾಣಿಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.17297634

## ABSTRACT:

ಜಾತಿಯು ಭಾರತ ಸಮಾಜದ ಒಂದು ಬಹುದೊಡ್ಡ ಕಗ್ಗಂಟಾಗಿದ್ದು, ಅನೇಕ ಸಾಮಾಜಿಕ, ಆರ್ಥಿಕ ಬಿಕ್ಕಟ್ಟುಗಳಿಗೆ ಕಾರಣವಾಗಿದೆ. ಅದು ದೌರ್ಜನ್ಯ ಮತ್ತು ಶೋಷಣೆಯ ಶಸ್ತ್ರವು ಆಗಿ ಬಳಕೆಯಾಗಿದೆ. ಭಾರತದ ಚರಿತ್ರೆಯನ್ನು ಅವಲೋಕಿಸಿದಾಗ ಅನೇಕ ಮಹನೀಯರು ಜಾತಿಯನ್ನು, ಅಸ್ಪೃಶ್ಯತೆಯನ್ನು ಹಿಂದೂ ಧರ್ಮದಿಂದ ಹೋಗಲಾಡಿಸಲು ಶತಶತಮಾನಗಳಿಂದ ಪ್ರಯತ್ನ ಮಾಡಿದ್ದಾರೆ. ಜಾತಿಯೆಂಬುದು ಹಿಂದೂ ಧರ್ಮಕ್ಕೆ ಅಂಟಿದ ಕಳಂಕವಾಗಿದೆ ಎಂದು ಅನೇಕರು ಟೀಕಿಸಿ, ಅದನ್ನು ಸರಿಪಡಿಸಲು ನಿರಂತರ ಹೋರಾಟ ನಡೆಸಿದರು. ಆಧುನಿಕ ಕಾಲದಲ್ಲಿ ಕನ್ನಡದ ಅನೇಕ ಲೇಖಕರು, ಕವಿಗಳು ತಮ್ಮ ಕಾವ್ಯ, ಕಥೆ, ಕಾದಂಬರಿ, ನಾಟಕ ಮತ್ತು ಲೇಖನಗಳ ಮೂಲಕ ಜಾತಿ ಕುರಿತು, ಅದು ಉಂಟುಮಾಡಿರುವ ಅನಾಹುತಗಳನ್ನು ಕುರಿತು ಮತ್ತು ಬಹುಮುಖ್ಯವಾಗಿ ಜಾತಿ ವಿನಾಶ ಮತ್ತು ಜಾತಿಯನ್ನು ಮೀರುವ ಕುರಿತು ಬರೆದರು, ಚರ್ಚಿಸಿದರು.

ತೇಜಸ್ವಿಯವರು ತಮ್ಮ ಜೀವಿತಾವಧಿಯಲ್ಲಿ ಮಂಡಿಸಿದ ಅನೇಕ ಚಿಂತನೆಗಳನ್ನು ಹೊಸ ವಿಚಾರಗಳು ಎಂಬ ಬೃಹತ್ ಗ್ರಂಥದಲ್ಲಿ ಸಂಕಲಿಸಲಾಗಿದೆ. ಈ ಕೃತಿಯನ್ನು ಅವರ ಅನುಪಸ್ಥಿತಿಯಲ್ಲಿ ನಂತರ ಪ್ರಕಟಿಸಲಾಗಿದೆ. ತೇಜಸ್ವಿಯವರು ಯಾವುದೇ ವಿಷಯವನ್ನು ವಿನೂತನವಾಗಿ ವಿಶ್ಲೇಷಿಸುತ್ತಿದ್ದ ರೀತಿ ಮತ್ತು ಅಪೂರ್ವ ಒಳನೋಟಗಳಿಂದ ಸಮಸ್ಯೆಯನ್ನು ನೋಡುತ್ತಿದ್ದ ಬಗೆ ಒಬ್ಬ ಲೇಖಕನಾಗಿ ಅವರಿಗಿದ್ದ ಸಾಮಾಜಿಕ ಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ. ಈ ಕೃತಿಯಲ್ಲಿ ತೇಜಸ್ವಿಯವರ ವಿಚಾರಗಳನ್ನು ಅರ್ಥಶಾಸ್ತ್ರ, ರಾಜಕೀಯ, ಭಾಷೆ ಮತ್ತು ಸಾಹಿತ್ಯ ವಿಮರ್ಶೆ, ರೈತ ಹೋರಾಟ, ಧರ್ಮ-ಸಂಸ್ಕೃತಿ, ಸಂದರ್ಶನಗಳು, ಜಾತಿ ವಿನಾಶ, ಪರಿಸರ ಕಾಳಜಿ ಮತ್ತು ಇತ್ಯಾದಿ ಎಂಬ ಶೀರ್ಷಿಕೆಗಳ ಅಡಿಯಲ್ಲಿ ವಿಂಗಡಿಸಲಾಗಿದೆ. ಜಾತಿ ವಿನಾಶ ಎಂಬ ಮುಖ್ಯ ಶೀರ್ಷಿಕೆಯ ಅಡಿಯಲ್ಲಿ ಒಟ್ಟು ಆರು ಲೇಖನಗಳಿವೆ. ಈ ಆರು ಲೇಖನಗಳಲ್ಲಿ ಮೀಸಲಾತಿ, ಜಾತಿ ವಿನಾಶ ಮತ್ತು ಅಂತರ್ಜಾತೀಯ ವಿವಾಹ ಕುರಿತು ತೇಜಸ್ವಿಯವರ ಚಿಂತನೆಗಳನ್ನು ಕ್ರೋಡೀಕರಿಸಲಾಗಿದೆ.

## KEYWORDS:

ಜಾತಿ, ಜಾತಿ ವಿನಾಶ, ಜಾತ್ಯಾತೀತ, ವರ್ಗ, ಮೀಸಲಾತಿ, ಅಂತರ್ಜಾತೀಯ ವಿವಾಹ.

ಇಂದು ಕರ್ನಾಟಕದಲ್ಲಿ ಒಳಮೀಸಲಾತಿ ಜಾರಿ ಹಾಗೂ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸಮೀಕ್ಷೆಯು ನಡೆಯುತ್ತಿರುವ ಮತ್ತು ಕೆಲವು ಸಮುದಾಯಗಳು ಮೀಸಲಾತಿಯ ಶೇಕಡವಾರು ಪಾಲನ್ನು ಹೆಚ್ಚಿಸಬೇಕೆಂದು ಹೋರಾಡುತ್ತಿರುವ ಈ ಸಂದರ್ಭದಲ್ಲಿ ತೇಜಸ್ವಿಯವರು ಮೀಸಲಾತಿಯ ನೈಜ ಉದ್ದೇಶ ಮತ್ತು ಜಾತಿ ವಿನಾಶ ಪ್ರಕ್ರಿಯೆಯಲ್ಲಿ ಮೀಸಲಾತಿಯ ಪಾತ್ರವನ್ನು ಕುರಿತು ಅಂದು ಲಂಕೇಶ್ ಪತ್ರಿಕೆಯಲ್ಲಿ ಹಂಚಿಕೊಂಡ ವಿಚಾರಗಳು ಮತ್ತು ಆಕಾಶವಾಣಿಯ ಸಂದರ್ಶನದ ಭಾಗವಾಗಿ ತೇಜಸ್ವಿಯವರು ಕೊಟ್ಟ ಹೇಳಿಕೆಗಳಲ್ಲಿ ಈ ವಿಚಾರಗಳು ಸಾದ್ಯಂತವಾಗಿ ಮತ್ತೆ ಮತ್ತೆ ಪ್ರಸ್ತಾಪವಾಗಿವೆ. ತೇಜಸ್ವಿಯವರು

ಇಲ್ಲಿ ಕೂಡ ಕಾರ್ಯಸಾಧ್ಯವಾದ, ವಾಸ್ತವವಾದ ಅನೇಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ತೇಜಸ್ವಿಯವರು ಹೇಳುವಂತೆ ಜಾತ್ಯಾತೀತ ರಾಷ್ಟ್ರ ನಿರ್ಮಾಣ ಭಾರತ ಸಂವಿಧಾನ ಸೂತ್ರಗಳಲ್ಲಿ ಒಂದು. ಆದರೆ ಭಾರತದಲ್ಲಿ ಇಂದು ಜಾತ್ಯಾತೀತ ವಾದ ಎಂಬುದಿಲ್ಲ. ಭಾರತದಲ್ಲಿ ಇಂದು ಎರಡು ಬಗೆಯ ಜಾತಿವಾದಿಗಳಿದ್ದಾರೆ. ಮೊದಲನೆಯ ಗುಂಪಿನವರು ಪ್ರತಿಭೆಗೆ ಅವಕಾಶ ನೀಡಿದರೆ ಸಾಕು ಜಾತಿ ಮಾಯವಾಗುತ್ತದೆ ಎನ್ನುವ ಮೇಲ್ವರ್ಗದ ಜನ ಮತ್ತು ಎರಡನೆಯ ಗುಂಪಿನವರು ಜಾತಿಯನ್ನು ಈ ದೇಶದಿಂದ ತೊಲಗಿಸಲು ಜಾತೀಯ ತಾರತಮ್ಯತೆಗೆದು ಹಾಕಬೇಕೆನ್ನುವವರು. "ಸ್ವಸಾಮರ್ಥ್ಯದಿಂದ ಸ್ಪರ್ಧಿಸಲಾರದಷ್ಟು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ಜಾತಿಗಳನ್ನು ಗುರುತಿಸಿ ಆ ಜಾತಿಗಳಿಗೆ ವಿಶೇಷ ಸವಲತ್ತುಗಳನ್ನು ನೀಡಬೇಕು ಎಂಬುದು ಈ ವಾದಿಗಳ ವಿಶ್ಲೇಷಣೆ." (ಹೊಸ ವಿಚಾರಗಳು, ಪುಟ ಸಂಖ್ಯೆ–630) ಎರಡನೆಯ ವಾದಿಗಳಿಗೆ ಬೆಂಬಲವಾಗಿರುವುದು ಸಂವಿಧಾನ. ಹಾಗಾಗಿ ಅದರ ಅಡಿ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳನ್ನು ಮೇಲೆತ್ತುವ ಕಾರ್ಯ ಮಾಡುತ್ತಿವೆ. ಆ ಮೂಲಕ ಎಲ್ಲಾ ಸಮುದಾಯಗಳ ಮಧ್ಯೆ ಸಾಮಾಜಿಕ ಸಮಾನತೆಯನ್ನು ಸ್ಥಾಪಿಸುವದು ಸರ್ಕಾರದ ಮತ್ತು ಸಂವಿಧಾನದ ಆಶಯ. ಇದು ಸರ್ವರನ್ನು ಒಳಗೊಳ್ಳುವ, ಸರ್ವಾಂಗೀಣ ಅಭಿವೃದ್ಧಿಯ ಆಶಯವಾಗಿದೆ. ಆದರೆ ಈ ಸಂದರ್ಭದಲ್ಲಿ ತೇಜಸ್ವಿಯವರಿಗೆ ಕಾಡುವ ಪ್ರಶ್ನೆ, "ಇದು ಜಾತ್ಯಾತೀತ ಸಮಾಜದ ಅರುಣೋದಯವೆ? ಜಾತಿಯಲ್ಲಿ ಸಮಾನತೆಯನ್ನು ತರುವ ಪ್ರಯತ್ನದಲ್ಲೇ ಜಾತ್ಯಾತೀತ ಸಮಾಜದ ಅಂಕುರಾರ್ಪಣೆಯೂ ಇರಬೇಡವೆ." (ಅದೇ, ಅದೇ ಪುಟ) ಇಲ್ಲಿ ತೇಜಸ್ವಿಯವರು ಬಹುತೇಕ ಬುದ್ಧಿಜೀವಿಗಳು ಕೇಳಲು ಹಿಂಜರಿಯುವ ಪ್ರಶ್ನೆಯನ್ನು, ಮೀಸಲಾತಿ ಮತ್ತು ಜಾತ್ಯಾತೀತ ಸಮಾಜದ ನಿರ್ಮಾಣದ ಕುರಿತು ಹಾಗೂ ಒಂದಕ್ಕೊಂದು ಅವು ಹೇಗೆ ಸಂಬಂಧ ಹೊಂದಿವೆ ಎಂಬುದನ್ನು ವಿವರಿಸಿ ಹೇಳುವಾಗ ಮೂಲ ವಿಷಯವನ್ನು ವಿಶದೀಕರಿಸುತ್ತಾರೆ. ಅಂದರೆ ನಮ್ಮ ಸಂವಿಧಾನ ನಿರ್ಮಾತೃಗಳ ನಿಜವಾದ ಆಶಯ ಏನಾಗಿತ್ತು? ಅಥವಾ ಅವರಿಗೆ ಭವಿಷ್ಯತ್ತಿನ ಸರಿಯಾದ ಅಂದಾಜು ಸಿಗಲಿಲ್ಲವೊ? ಎನ್ನುವ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಮಾಡುತ್ತಾರೆ.

"ಮೀಸಲಾತಿ ಜಾತಿಗಳನ್ನು ಸಮರ್ಥಿಸುವ, ಜಾತೀಯತೆಯನ್ನು ಪ್ರೋತ್ಸಾಹಿಸುವ ಆಂದೋಳನವೆ? ಅಥವಾ ಭಾರತದ ಜಾತ್ಯಾತೀತ ಸೆಕ್ಯುಲರ್ ಆಂದೋಳನದ ಒಂದು ಭಾಗವೆ?" (ಅದೇ, ಪುಟ ಸಂಖ್ಯೆ–620) ಎನ್ನುವ ಪ್ರಶ್ನೆಗಳ ಮೂಲಕ ತೇಜಸ್ವಿಯವರು ಮೀಸಲಾತಿಯ ಕುರಿತು ಇರುವ ಗೊಂದಲಗಳನ್ನು ಪರಿಹರಿಸಿಕೊಳ್ಳಬೇಕು, ಸ್ಪಷ್ಟಪಡಿಸಿಕೊಳ್ಳಬೇಕು ಎನ್ನುತ್ತಾರೆ. ಮೀಸಲಾತಿಯ ಪರಿಣಾಮದಿಂದ ಜಾತಿ ಸಂಘಟನೆಗಳು, ಜಾತಿಗೊಬ್ಬ ಜಗದ್ಗುರುಗಳು ಹುಟ್ಟಿಕೊಂಡಿದ್ದನ್ನು, ಹೊಸ ಹೊಸ ವೃತ್ತಿ ಮೂಲದ ಸಮುದಾಯಗಳು ತಮ್ಮದು ಪ್ರತ್ಯೇಕ ಜಾತಿಗಳೆಂದು ಅವುಗಳಿಗೆ ಪ್ರತ್ಯೇಕ ಮೀಸಲಾತಿಯ ಜೊತೆಗೆ ತಮ್ಮದೇ ಅತ್ಯಂತ ಹಿಂದುಳಿದ ಸಮುದಾಯವೆಂದು ಹಕ್ಕನ್ನು ಪ್ರತಿಪಾದಿಸಿದ್ದನ್ನು ತೇಜಸ್ವಿ ಗಮನಿಸುತ್ತಾರೆ. ಇದು ಮೀಸಲಾತಿಯ ಉದ್ದೇಶವೆ? ಎನ್ನುವ ಪ್ರಶ್ನೆಯು ಅವರನ್ನು ಕಾಡುತ್ತದೆ.

ತೇಜಸ್ವಿಯವರ ಪ್ರಕಾರ, ಅಂಬೇಡ್ಕರ್ ಅವರ ಮೀಸಲಾತಿಯ ಪರಿಕಲ್ಪನೆಯ ಉದ್ದೇಶ ಇದಾಗಿರಲಿಲ್ಲ. "ಜಾತ್ಯಾತೀತ ಭಾರತದ ನಿರ್ಮಾಣಕ್ಕಾಗಿಯೇ ಅವರು ಮೀಸಲಾತಿಯನ್ನು ಸಂವಿಧಾನದಲ್ಲಿ ಸೇರಿಸಿದುದು. ಜಾತಿಯ ಕಾರಣದಿಂದಲೇ ಹಿಂದುಳಿದ ವರ್ಗಗಳನ್ನು ಜಾತಿ ಮೂಲಕವೇ ಗುರುತಿಸಿ ಮೇಲೆತ್ತಬೇಕಾಗುತ್ತದೆ ಎಂದು ಅವರು

ಮೀಸಲಾತಿಯನ್ನು ಸಂವಿಧಾನದಲ್ಲಿ ಅಳವಡಿಸಿದುದು.'' (ಅದೇ, ಪುಟ ಸಂಖ್ಯೆ-621) ಬಾಬಾ ಸಾಹೇಬರ ಕನಸು ಭಾರತವನ್ನು ಜಾತ್ಯಾತೀತ ರಾಷ್ಟ್ರವನ್ನಾಗಿ ರೂಪಿಸುವುದೆ ಆಗಿತ್ತು. ಸ್ವತಃ ಜಾತೀಯತೆಯ ಘೋರ ಸಂಕಟಗಳನ್ನು, ಅವಮಾನಗಳನ್ನು ಅನುಭವಿಸಿದ್ದ, ಕಣ್ಣಾರೆ ನೋಡಿದ್ದ ಬಾಬಾ ಸಾಹೇಬರು ವರ್ಣಾಶ್ರಮವನ್ನು ಹೋಗಲಾಡಿಸಲು ಮೀಸಲಾತಿಯ ಅಸ್ತ್ರ ಉಪಯೋಗಿಸಿದ್ದರು. ಆದರೆ ನಮ್ಮ ತಲೆಮಾರಿನ ರಾಜಕೀಯ ಧುರೀಣರು ಅದನ್ನು ಸರಿಯಾಗಿ ಜಾರಿಗೆ ತರುವಲ್ಲಿ ಸೋತರು ಮತ್ತು ಆ ಮೂಲಕ ಹಿಂದುಳಿದ ವರ್ಗಗಳ ಪ್ರಗತಿ ಕುಂಠಿತವಾಯಿತು ಮತ್ತು ಜಾತ್ಯಾತೀತ ಸಮಾಜದ ಕನಸು ಸಂಪೂರ್ಣವಾಗಿ ಈಡೇರಿಲ್ಲ. ತೇಜಸ್ವಿಯವರು ಹೇಳುವಂತೆ ಮತ್ತು ಇಂದು ಸಮಾಜದಲ್ಲಿ ಎದ್ದು ಕಾಣುತ್ತಿರುವಂತೆ ''ತಮ್ಮ ತಮ್ಮ ಜಾತಿಗಳ ಸಮ್ಮೇಳನಗಳನ್ನು ಮಾಡುತ್ತಾ ತಮ್ಮ ಜಾತಿ ಇನ್ನೊಂದರಿಂದ ಪ್ರತ್ಯೇಕ ಎಂದು ಹೇಳುತ್ತಾ, ತಮ್ಮ ಜಾತಿಗೆ ತಕ್ಕ ಪ್ರಾತಿನಿಧ್ಯವಿಲ್ಲೆಂದು ಕೂಗಾಡುತ್ತಾ ಜಾತಿ ಪದ್ಧತಿಯ ಮುಷ್ಟಿ ಬಿಗಿಗೊಳ್ಳುತ್ತಿರುವುದನ್ನೇ ನಾವು ಕಾಣುವುದಿಲ್ಲವೆ?'' (ಅದೇ, ಅದೇ ಪುಟ), ತೇಜಸ್ವಿಯವರು ಅಂದೇ ಗುರುತಿಸಿರುವಂತೆ ಪ್ರತಿ ಸಮುದಾಯವು ತಮ್ಮ ಸಮುದಾಯವಾರು ಜಾತಿ ಸಮ್ಮೇಳನ ಮಾಡುತ್ತಾ ಮೀಸಲಾತಿಯಲ್ಲಿ ತಮ್ಮ ಸಮುದಾಯಕ್ಕೆ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲವೆಂದು ಹೋರಾಟಗಳು ಇಂದು ಜರಗುತ್ತಿರುವುದನ್ನು ಕಾಣಬಹುದು. ಹಿಂದುಳಿದ ವರ್ಗಗಳನ್ನು ಮೇಲೆತ್ತಿ ಸಮಾನತೆಯ ಪರಿಕರವಾಗಬೇಕಿದ್ದ ಮೀಸಲಾತಿಯ ಮೂಲ ಆಶಯ ಇಂದು ಬಹುತೇಕ ಕಣ್ಮರೆಯಾಗಿರುವುದನ್ನು ಕಾಣಬಹುದು. ಮೀಸಲಾತಿಯು ಇಂದು ವೋಟ್ ಬ್ಯಾಂಕ್ ರಾಜಕಾರಣದ ದಾಳವಾಗಿದೆ ಎಂದು ಟೀಕೆಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದು. ಹಾಗಾಗಿ ಜಾತಿಯ ಕಪಿಮುಷ್ಟಿ ಬಿಗಿಗೊಳ್ಳುತ್ತಿದೆ.

ತೇಜಸ್ವಿಯವರು ತುಂಬಾ ಗಟ್ಟಿಯಾಗಿ ಹೇಳುವ ''ಈ ದೇಶದ ಅವನತಿಯಲ್ಲಿ ತಮ್ಮ ಉನ್ನತಿಯನ್ನು ಸಾಧಿಸಿಕೊಳ್ಳ ಬಯಸುತ್ತಿರುವವರಲ್ಲಿ ಇವರೂ ಪಾಲುದಾರರಾಗಿದ್ದಾರೆ'' (ಅದೇ, ಪುಟ ಸಂಖ್ಯೆ-615) ಎನ್ನುವ ಮಾತಿನಲ್ಲಿ ಅವರ ಸೂಕ್ಷ್ಮ ಮತ್ತು ಆಳವಾದ ಪ್ರಾಮಾಣಿಕ ವಿಶ್ಲೇಷಣೆ ಇದೆ. ಅಂದರೆ ಭಾರತೀಯ ಸಮಾಜದ ಮೇಲ್ವರ್ಗದ ಜನರಲ್ಲಿ ಕಂಡುಬರುವ ಹಿಪೋಕ್ರಸಿಯನ್ನು ತೇಜಸ್ವಿಯವರು ಸರಿಯಾಗಿಯೇ ಗುರುತಿಸಿದ್ದಾರೆ. ದೇಶ ಸಂಪೂರ್ಣವಾಗಿ ಪ್ರಗತಿ ಸಾಧಿಸಲು ಅವಕಾಶಗಳ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆಯಾಗಬೇಕು. ಯಾವುದೇ ಒಂದು ಸಮುದಾಯವನ್ನು ಕಡೆಗಣಿಸಿ ಅಥವಾ ಹೊರಗಿಟ್ಟು ದೇಶದ ಸಮತೋಲಿತ ಅಭಿವೃದ್ಧಿ ಸಾಧಿಸಲು ಎಂದೆಂದೂ ಸಾಧ್ಯವಿಲ್ಲ. ಎಲ್ಲಾ ಸಮುದಾಯಗಳು ಒಟ್ಟಿಗೆ ನಡೆದಾಗ, ಸಮಾನ ಪ್ರಗತಿ ಸಾಧಿಸಿದಾಗ ಇಡೀ ದೇಶದ ಅಭಿವೃದ್ಧಿ ಸಾಧ್ಯ. ಆದರೆ ಇದನ್ನು ಅರ್ಥೈಸಿಕೊಳ್ಳದ ಮೇಲ್ವರ್ಗಗಳು ದೇಶ ಅವನತಿ ಹೊಂದಿದರೂ ಪರವಾಗಿಲ್ಲ ತಮ್ಮ ಸಮುದಾಯ ಮಾತ್ರ ಉನ್ನತಿಯನ್ನು ಸಾಧಿಸಲಿ ಎಂಬ ರೀತಿಯಲ್ಲಿ ವರ್ತಿಸುತ್ತಿವೆ. ಇದು ದೇಶದ ಬಗ್ಗೆ ಕಾಳಜಿ ಇಲ್ಲದ ಕೇವಲ ತಮ್ಮ ಸಮುದಾಯದ ಕುರಿತು ಇರುವ ಅತಿಯಾದ ವ್ಯಾಮೋಹವಾಗಿದೆ. ಸ್ವಾರ್ಥದ ಈ ಪೊರೆ ಕಳಚದ ಹೊರತು ಸಂಪೂರ್ಣ ಮತ್ತು ಸರ್ವಾಂಗೀಣ ಪ್ರಗತಿ ಸಾಧ್ಯವಿಲ್ಲ. ಇದನ್ನೇ ತೇಜಸ್ವಿಯವರು ಒತ್ತಿ ಹೇಳುತ್ತಿರುವುದು.

ಈ ಹಿನ್ನೆಲೆಯಲ್ಲಿ ತೇಜಸ್ವಿ ಗುರುತಿಸಿರುವ ಪರಿಹಾರಗಳಲ್ಲಿ, ಅಂತರ್ಜಾತಿ ವಿವಾಹವೂ ಒಂದು. ಅವರ ಪ್ರಕಾರ ಜಾತ್ಯಾತೀತ ಸಮಾಜ ನಮ್ಮ ಗುರಿಯಾದರೆ ಅಂತರ್ಜಾತಿ ವಿವಾಹವನ್ನು ಪರಿಗಣಿಸಿ ಇವರಿಗೆ ಶೇಕಡ ಒಂದಾದರೂ ಮೀಸಲಾತಿ ನೀಡಬೇಕು. ಅಂತರ್ಜಾತಿ ವಿವಾಹ ಮಾಡಿಕೊಂಡು ಜಾತಿಯ ವ್ಯೂಹದಿಂದ ಹೊರಬಿದ್ದಿರುವ ಪಂಗಡವನ್ನು

ಮೊದಲು ಗುರುತಿಸಬೇಕು. ನಂತರ ಸರ್ಕಾರದಿಂದ ಅವರಿಗೆ ವಿಶೇಷ ಸವಲತ್ತು ನೀಡಬೇಕು. ಆ ಮೂಲಕ ನಾವು ಎರಡು ಸಮುದಾಯಗಳ ಜನರಿಗೆ ಮೀಸಲಾತಿ ಕೊಟ್ಟಂತಾಗುತ್ತದೆ ಎಂದು ಅವರು ಪ್ರತಿಪಾದಿಸುತ್ತಾರೆ. ಮದುವೆಯಾಗಿ ಒಂದು ಜಾತ್ಯಾತೀತ ಸಮಾಜ ನಿರ್ಮಿಸಲು ನೆರವಾಗುವವರಿಗೆ ಸರ್ಕಾರದ ವಿಶೇಷ ಸವಲತ್ತು, ಮತ್ತಿತರ ಅನುಕೂಲಗಳನ್ನು ಮೀಸಲಾತಿಯ ಮೂಲಕ ನೀಡುವುದು ಸರಿಯಾದ ಕ್ರಮ ಮತ್ತು ಅದರಲ್ಲಿ ಯಾವುದೇ ತಪ್ಪಿಲ್ಲ ಎನ್ನುವುದು ತೇಜಸ್ವಿಯವರ ಅಭಿಪ್ರಾಯ. ಅಂದರೆ ಈ ಮೂಲಕವಾದರೂ ಒಂದು ಜಾತ್ಯಾತೀತ ರಾಷ್ಟ್ರ ನಿರ್ಮಾಣವಾಗಬಹುದು ಎನ್ನುವುದು ಅವರ ಕನಸು.

ಅಂತರ್ಜಾತೀಯ ವಿವಾಹ ಆದವರಿಗೆ ನೌಕರಿಯಲ್ಲೂ ಅವರ ಮಕ್ಕಳಿಗೆ ವಿದ್ಯಾಭ್ಯಾಸದಲ್ಲೂ ಒಂದು ತಲೆಮಾರಿನವರೆಗೆ ಶೇಕಡ ಐದರಷ್ಟು ಮೀಸಲಾತಿ ದೊರಕಿಸಬೇಕೆಂದು ಡಾ. ಸಿದ್ಧಲಿಂಗಯ್ಯನವರು ವಿಧಾನ ಪರಿಷತ್ತಿನಲ್ಲಿ 1990 ರಲ್ಲಿ ಒತ್ತಾಯ ಮಾಡಿದ್ದನ್ನು ತೇಜಸ್ವಿಯವರು ತಮ್ಮ ಲೇಖನದಲ್ಲಿ ಉಲ್ಲೇಖಿಸುತ್ತಾರೆ. ತೇಜಸ್ವಿಯವರ ಪ್ರಕಾರ "ರಾಜಕಾರಣಿಗಳಿಗೆ ಜಾತ್ಯಾತೀತ ಸಮಾಜ ನಿರ್ಮಿಸುವುದರಲ್ಲಿ ಯಾವ ಶ್ರದ್ಧೆಯೂ ಇಲ್ಲ. ಅಂತರ್ಜಾತೀಯ ವಿವಾಹವಾದವರಿಗೆ ಪ್ರೋತ್ಸಾಹ ಕೊಡಲು ಕಾನೂನು ಮಾಡಿದರೆ ಅದು ಸಂವಿಧಾನದ ಯಾವ ವಿಧಿಗೂ ಅದು ವ್ಯತಿರಿಕ್ತವಲ್ಲ." (ಅದೇ, ಪುಟ ಸಂಖ್ಯೆ-617) ತೇಜಸ್ವಿಯವರು ವಿಶ್ಲೇಷಣೆ ಮಾಡಿರುವಂತೆ ಅಂತರ್ಜಾತೀಯ ಮದುವೆಯಾದವರಿಗೆ ವಿಶೇಷ ಸವಲತ್ತು ನೀಡಲು ರಾಜಕಾರಣಿಗಳಿಗೆ ಇಚ್ಛಾಶಕ್ತಿ ಇಲ್ಲ ಮತ್ತು ಅವರು ನಿಜವಾಗಿಯೂ ಜಾತ್ಯಾತೀತರಾಗಲು ಸಿದ್ಧರಿಲ್ಲ. ಯಾಕೆಂದರೆ ಈ ಕುರಿತು ಶಾಸನ ತರಲು ಸಂವಿಧಾನದ ಯಾವುದೇ ವಿಧಿ ಅವರಿಗೆ ಅಡ್ಡಿಯಾಗುವುದಿಲ್ಲ.

"ಅಂತರ್ಜಾತೀಯ ವಿವಾಹವಾದವರು ತಾವೇ ಒಂದು ಜಾತಿ ಎಂದು ಸಂಘಟನೆಯಾಗದ ಕಾರಣ, ಮತ್ತು ಮೂಲತಃ ಇವರೆಲ್ಲ ಆದರ್ಶವಾದಿಗಳಾದ್ದರಿಂದ ಈ ಸಮುದಾಯ ಆಯೋಗದ ಮುಂದಾಗಲಿ, ಮಂತ್ರಿಗಳ ಮುಂದಾಗಲಿ ಕೈ ಜೋಡಿಸಿ ಮೀಸಲಾತಿಗೆ ಅಂಗಲಾಚಿ ನಿಲ್ಲುವುದಿಲ್ಲ." (ಅದೇ, ಪುಟ ಸಂಖ್ಯೆ-618). ಅಂತರ್ಜಾತೀಯ ವಿವಾಹ ಮಾಡಿಕೊಂಡಿರುವ ಜನರು ತಮ್ಮ ವೈಯಕ್ತಿಕ ಆದರ್ಶಕ್ಕೆ ಬದ್ಧವಾಗಿದ್ದು ಅವರು ಮೀಸಲಾತಿಗಾಗಿ ಅಂಗಲಾಚುವುದಿಲ್ಲ ಅಥವಾ ಉಳಿದ ಸಮುದಾಯಗಳಂತೆ ಮೀಸಲಾತಿಗಾಗಿ ಒತ್ತಡ ಗುಂಪಿನಂತೆ (Pressure Groups) ಕೆಲಸ ಮಾಡುವುದಿಲ್ಲ. ಆ ಕಾರಣಕ್ಕಾಗಿ ಅವರಿಗೆ ಕೊಡಬಹುದಾಗಿದ್ದ ಸೌಲಭ್ಯಗಳು ಅವರಿಗೆ ದೊರೆಯುತ್ತಿಲ್ಲ.

ಹಾಗಾಗಿ ಮುಖ್ಯವಾದ ಪ್ರಶ್ನೆ ಉಲ್ಬಣಿಸುತ್ತಿರುವ ಜಾತೀಯತೆಯನ್ನು ನಿಲ್ಲಿಸುವುದು ಹೇಗೆ? ಎನ್ನುವ ಪ್ರಶ್ನೆ ಹಾಗೆಯೇ ಉಳಿಯುತ್ತದೆ ಮತ್ತು ಜಾತಿಗಳು ಅಳಿಯುವುದರ ಬದಲು ಇನ್ನಷ್ಟು ಕಗ್ಗಂಟಾಗುತ್ತಿವೆ ಎನ್ನುವುದು. ಬದಲಿಗೆ ಜಾತೀಯತೆ ಮತ್ತು ಜಾತಿ ವೈಷಮ್ಯ ಹೆಚ್ಚಾಗುತ್ತಿರುವುದು ವೈರುಧ್ಯದ ಸಂಗತಿಯಾಗಿದೆ. ತೇಜಸ್ವಿಯವರ ಪ್ರಕಾರ ಜಾತ್ಯಾತೀತ ಭಾರತದ ನಿರ್ಮಾಣಕ್ಕೆ ಮೊದಲ ಕಂಟಕ ಭಾರತದ ರಾಜಕಾರಣ. ಜಾತಿಯನ್ನೇ ಬಂಡವಾಳ ಮಾಡಿಕೊಂಡಿರುವ ರಾಜಕಾರಣಿಗಳು ಮತ್ತು ಅದರ ಆಧಾರದ ಮೇಲೆ ಚುನಾವಣೆಗಳನ್ನು ಎದುರಿಸುವುದು.

ಅನಿಷ್ಟ ಜಾತಿ ಪದ್ಧತಿ, ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸೆಕ್ಯುಲರ್ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಸಹಪಂಕ್ತಿ ಭೋಜನ ಮತ್ತು ಅಂತರ್ಜಾತೀಯ ವಿವಾಹಗಳೇ ಮಾರ್ಗ ಎಂದು ಗಾಂಧೀಜಿ ಹೇಳಿದ್ದನ್ನು ಉಲ್ಲೇಖಿಸುವ ತೇಜಸ್ವಿ ಭಾರತದ ವಿಸ್ತಾರ ಮತ್ತು

ಜನಸಂಖ್ಯೆಗೆ ಹೋಲಿಸಿದಾಗ ಇಲ್ಲಿಯವರೆಗೂ ನಡೆದಿರುವ ಇಂತಹ ಪ್ರಯೋಗಗಳು ಕೇವಲ ವೈಯಕ್ತಿಕ ಸಾಧನೆಗಳಾದುವೇ ಹೊರತು ಸಾಮಾಜಿಕ ಬದಲಾವಣೆಯ ಮಾರ್ಗ ಆಗಲೇ ಇಲ್ಲ ಎನ್ನುವುದನ್ನು ಗುರುತಿಸುತ್ತಾರೆ. ಹಾಗೆನೇ ತೇಜಸ್ವಿಯವರ ಬಹುಮುಖ್ಯವಾದ ಅವಲೋಕನವೆಂದರೆ ಸರ್ಕಾರದ ಅನೇಕ ಉಪಕ್ರಮಗಳು, ಯೋಜನೆಗಳು, "ಕಾರ್ಯಕ್ರಮಗಳೆಲ್ಲ ಹಿಂದುಳಿದ ವರ್ಗ, ಜಾತಿಗಳನ್ನು ಮೇಲೆತ್ತಲು ಸಹಾಯ ಮಾಡಿದರೂ ಜಾತಿ ಪದ್ಧತಿಯನ್ನೂ, ಜಾತೀಯತೆಯನ್ನೂ ಮತ್ತಷ್ಟು ಉಲ್ಬಣಗೊಳಿಸಿತೇ ಹೊರತು ಜಾತ್ಯಾತೀತ ಸಮಾಜದತ್ತ ಭಾರತ ಹೆಜ್ಜೆ ಇಡಲೇ ಇಲ್ಲ ಎನ್ನುವುದು." (ಅದೇ, ಪುಟ ಸಂಖ್ಯೆ–637). "ನಮ್ಮ ಕಾರ್ಯಕ್ರಮಗಳು ನಮ್ಮ ಉದ್ದೇಶಕ್ಕೆ ಸಂಪೂರ್ಣ ವ್ಯತಿರಿಕ್ತವಾದ ಫಲಿತಾಂಶಗಳನ್ನು ನೀಡತೊಡಗಿರುವುದೇಕೆ?" (ಅದೇ, ಪುಟ ಸಂಖ್ಯೆ–638) ಎನ್ನುವ ಪ್ರಶ್ನೆಯು ಅವರನ್ನು ಕಾಡುತ್ತದೆ. ಅಂದರೆ ನಮ್ಮ ಮೂಲ ಆಶಯ ಜಾತ್ಯಾತೀತ ಸಮಾಜದ ನಿರ್ಮಾಣ, ಅದಕ್ಕಾಗಿ ಹಲವಾರು ಯೋಜನೆಗಳಿವೆ. ಆದರೆ ನಾವು ಎಡವಿದ್ದೆಲ್ಲಿ ಎನ್ನುವ ಆತ್ಮವಿಶ್ಲೇಷಣೆ ಮಾಡಿಕೊಳ್ಳುವ ಅನಿವಾರ್ಯತೆ ಇದೆ. ಹಾಗಾದಾಗ ಮಾತ್ರ ನಾವು ಮೂಲ ಆಶಯಕ್ಕೆ ಧಕ್ಕೆ ಆಗದ ರೀತಿಯಲ್ಲಿ ಮರುಯೋಚಿಸಬಹುದು ಮತ್ತು ಯೋಜಿಸಬಹುದು. ಯಾವ ಜಾತಿಗೂ ಸೇರಲಿಚ್ಛಿಸದ ಗುಂಪುಗಳು ಎಲ್ಲಿಯೂ ಸಲ್ಲದ ಮುಖರಹಿತ ತ್ರಿಶಂಕುಗಳಾಗಿರುವುದನ್ನು ಗುರುತಿಸುವ ತೇಜಸ್ವಿ, ತಮ್ಮ ಅಸ್ತಿತ್ವಕ್ಕೆ ಜಾತಿಯೊಂದನ್ನು ಆಶ್ರಯಿಸುವ ಅನಿವಾರ್ಯತೆಯನ್ನು ನಿವಾರಿಸಬೇಕೆಂದು ಮತ್ತು ಅಂತಹ ಗುಂಪುಗಳಿಗೆ ಪ್ರೋತ್ಸಾಹ ನೀಡುವ ಮಹತ್ವವನ್ನು ಮನಗಾಣಿಸುತ್ತಾರೆ. ಹಿಂದುಳಿದ ಜಾತಿಗಳನ್ನು ಮುನ್ನೆಲೆಗೆ ತರಬೇಕೆನ್ನುವ ಕಳಕಳಿಯ ಜೊತೆಗೆ ಅಂತಿಮವಾಗಿ ಭಾರತೀಯ ಸಮಾಜವನ್ನು ಜಾತೀಯ ವಿಷವೃತ್ತದಿಂದ ಬಿಡುಗಡೆಗೊಳಿಸುವ ಮಾರ್ಗವನ್ನು ನಾವು ಯೋಚಿಸುವ ತುರ್ತಿನ ಕುರಿತು ತೇಜಸ್ವಿ ನಮ್ಮೆಲ್ಲರ ಗಮನ ಸೆಳೆಯುತ್ತಾರೆ.

ಈ ಕುರಿತು ತೇಜಸ್ವಿಯವರ ಆಲೋಚನೆಗಳು ಮತ್ತು ಕಾರ್ಯಸಾಧ್ಯವಾದ ಸಲಹೆಗಳು ಈ ರೀತಿ ಇವೆ. "ನಾವೀಗ ಯಾವೊಂದು ಜಾತಿಯೊಂದಿಗೂ ನಮ್ಮನ್ನು ಗುರುತಿಸಿಕೊಳ್ಳದೆ ಭಾರತೀಯರಾಗಿ ಈ ಸಮಾಜದಲ್ಲೇ ಅಸ್ತಿತ್ವ ಪಡೆಯಬೇಕೆಂದಾದರೆ ನಮ್ಮನ್ನು ಜಾತ್ಯಾತೀತರೆಂದು ಗುರುತಿಸಿಕೊಳ್ಳಲು ಸರ್ಕಾರದಿಂದ ಮೊಟ್ಟಮೊದಲು ಪಡೆದುಕೊಳ್ಳಬೇಕಾದುದು, ಈ ಸಮುದಾಯಕ್ಕೆ ಮನ್ನಣೆ, ಜಾತ್ಯಾತೀತ ಎಂದರೆ ಏನೆಂಬ ಅಧಿಕೃತ ವಿವರಣೆ. ಸರ್ಕಾರಕ್ಕೆ ಸಂಬಂಧಪಟ್ಟ ಎಲ್ಲ ಅರ್ಜಿಗಳಲ್ಲೂ ಈ ಸಮುದಾಯಕ್ಕೆ ಒಂದು ಕಾಲಂ." (ಅದೇ, ಪುಟ ಸಂಖ್ಯೆ–640). ಜೊತೆಗೆ ಈಗಾಗಲೇ ಹೇಳಿರುವಂತೆ ಅಂತರ್ಜಾತಿ ವಿವಾಹಿತರಿಗೆ ಶೇಕಡಾ ಐದರ ಮೀಸಲಾತಿ ಮತ್ತು ವಿವಾಹ ನೋಂದಣಿಗಳನ್ನು ರಿಜಿಸ್ಟ್ರಾರ್ ಕಛೇರಿಯಿಂದ ತಪ್ಪಿಸಿ ಕುಟುಂಬ ನ್ಯಾಯಾಲಯಗಳಂತಹ ಸಂಸ್ಥೆಗಳ ಸುಪರ್ದಿಗೆ ವಹಿಸುವುದು. ತೇಜಸ್ವಿಯವರು ಸ್ವತಃ ಅಂತರ್ಜಾತಿ ವಿವಾಹ ಮಾಡಿಕೊಂಡವರು, ಆ ಹಿನ್ನೆಲೆಯಲ್ಲಿ ಅವರ ಆಳವಾದ ಆಲೋಚನೆಯ ಫಲಶ್ರುತಿಯಾದ ಈ ವಿಚಾರಗಳನ್ನು ಇಂದಿಗೂ ಕೂಡ ಚರ್ಚಿಸದಿರುವುದು, ಈ ಕುರಿತು ಸಂವಾದಗಳು ಆಗದೇ ಇರುವುದು ಮತ್ತು ಸರ್ಕಾರಗಳು ಈ ಕುರಿತು ದಿವ್ಯ ನಿರ್ಲಕ್ಷ್ಯ ಧೋರಣೆ ಹೊಂದಿರುವ ಕಾರಣ, ಈ ಆಲೋಚನೆಗಳು ಕಾರ್ಯಗತವಾಗದಿರುವುದನ್ನು ಕಾಣಬಹುದು.

ಒಟ್ಟಿನಲ್ಲಿ ತೇಜಸ್ವಿಯವರು ಮೀಸಲಾತಿಯ ಮೂಲ ಉದ್ದೇಶ ಹಿಂದುಳಿದವರ ಪ್ರಗತಿಯ ಜೊತೆಗೆ ಭಾರತದಲ್ಲಿ ಜಾತ್ಯಾತೀತ ಸಮಾಜದ ನಿರ್ಮಾಣವು ಆಗಿತ್ತು ಎನ್ನುವುದನ್ನು ಹೇಳುತ್ತಾ ಭಾರತದ ರಾಜಕಾರಣವೇ ಈ ಪ್ರಕ್ರಿಯೆಯಲ್ಲಿ ಅಡ್ಡಗಾಲಾಗಿರುವುದನ್ನು

ಸ್ಪಷ್ಟಪಡಿಸುತ್ತಾರೆ. ಇನ್ನು ಜಾತ್ಯಾತೀತ ಸಮಾಜವನ್ನು ರೂಪಿಸುವಲ್ಲಿ ಕೈಗೊಳ್ಳಬಹುದಾದ ವಾಸ್ತವಿಕ ಕ್ರಮಗಳನ್ನು ಚರ್ಚಿಸುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ತೇಜಸ್ವಿಯವರ ಆಲೋಚನೆಗಳನ್ನು ನಾವು ಇಂದು ಇನ್ನಷ್ಟು ವಿಸ್ತರಿಸಿಕೊಂಡು, ಚರ್ಚೆ, ಸಂವಾದಗಳ ಮೂಲಕ ಅಂತರ್ಗತ ಮಾಡಿಕೊಳ್ಳುವ ಮತ್ತು ನೀತಿ ನಿರೂಪಣೆಯಲ್ಲಿ ಸೇರಿಸಿಕೊಳ್ಳುವ ಅವಶ್ಯಕತೆ ಹಿಂದಿಗಿಂತಲೂ ಇಂದು ಹೆಚ್ಚಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು:**

1. ಎಚ್ ನಾಯಕಜಿ., (2011) ಮೌಲ್ಯ ಮಾರ್ಗ: ಸಂಪುಟ 1, ಸಿರಿವರ ಪ್ರಕಾಶನ, ಬೆಂಗಳೂರು.
2. ಕೆ.ವಿ.ಎನ್., (2020) ತೊಂಡುಮೇವು :ಕಂತೆ ಮೂರು, ಪ್ರಗತಿಗ್ರಾಫಿಕ್ಸ್, ಬೆಂಗಳೂರು.
3. ವಡ್ಡು ಚಂದ್ರಕಾಂತ್., (2024) ವಿಸ್ಮಯ ವಿಮರ್ಶೆ, ಸಮಾಜಮುಖಿ ಪ್ರಕಾಶನ, ಬೆಂಗಳೂರು.
4. ನರೇಂದ್ರ ರೈ ದೇರ್ಲ, (2024)., ಪೂರ್ಣಚಂದ್ರ ತೇಜಸ್ವಿ, ಕನಸು ಪ್ರಕಾಶನ, ಪುತ್ತೂರು.
5. ತರೀಕೆರೆ ರಹಮತ್., (2016)., ಕತ್ತಿಯಂಚಿನ ದಾರಿ, ಅಭಿನವ, ಬೆಂಗಳೂರು.
6. ಎಸ್.ಆರ್, ವಿಜಯಶಂಕರ., (2019), ಅಪ್ರಮೇಯ, ಸಪ್ನ ಬುಕ್ ಹೌಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.